ಹಳ್ಳಿಯ ಹೊಲಗದ್ದೆ ಬಯಲಿನಲ್ಲಿ ವಿಹರಿಸುವಾಗ ನೀಲಿ ವರ್ಣದ ಹಕ್ಕಿಯೊಂದು ನಿಮ್ಮ ಕಣ್ಣಿಗೆ ಬೀಳಬಹುದು. ಆಕಾರದಲ್ಲಿ ಅದು ಪಾರಿವಾಳದಂತೆ ಕಂಡರೂ ಕಾಗೆಯಂತೆ ಚಾಕ್ ಚಾಕ್... ಧ್ವನಿ ಹೊರಡಿಸಿದಾಗ ಥಟ್ಟನೆ ಅದು ನೀಲಕಂಠ (ಇಂಡಿಯನ್ ರೋಲರ್) ಹಕ್ಕಿ ಎಂಬ ಗುರುತು ಸ್ಮೃತಿಪಟಲದಲ್ಲಿ ಮೂಡುತ್ತದೆ. ತದೇಕಚಿತ್ತದಿಂದ ಅದನ್ನೇ ನೋಡುತ್ತಾ ನಿಂತರೆ ನಿಮ್ಮ ಮೇಲೆ ಅದು ಸಂಶಯ ಬೀರುತ್ತದೆ. ತಕ್ಷಣವೇ ತನ್ನ ನೀಲಿ ರೆಕ್ಕೆಗಳನ್ನು ಪಟ್ ಪಟ್ ಎಂದು ಬಡಿಯುತ್ತಾ ಹಾರಿಹೋಗುತ್ತದೆ. ಅದರ ತಿರುಚು ಹಾಗೂ ಮೊಗಚು ಹಾರಾಟದಿಂದಲೇ ಅದಕ್ಕೆ 'ಇಂಡಿಯನ್ ರೋಲರ್' ಎಂಬ ಹೆಸರು ಬಂದಿದೆ.

ನೀಲಕಂಠ ರೋಲರ್ ಜಾತಿಗೆ ಸೇರಿದ್ದು, ಉದ್ದ ಸುಮಾರು 25 ಅಂಗುಲ, ತೂಕ 80ರಿಂದ 100 ಗ್ರಾಂ. ಮೋಹಕ ವರ್ಣದ ಈ ಹಕ್ಕಿಗೆ ವೇಗವಾಗಿ ಹಾರಲು ಪೂರಕವಾದ ರೆಕ್ಕೆಗಳಿವೆ. ಕೊಕ್ಕುಗಳು ಉದ್ದವಾಗಿದ್ದು, ಚಪ್ಪಟೆಯಾಗಿರುತ್ತವೆ. ಕೊಕ್ಕು ಮತ್ತು ಕಣ್ಣುಗಳ ಬಣ್ಣ ಗಾಢ ಕಪ್ಪು. ತಲೆಯ ಮೇಲ್ಭಾಗ, ರೆಕ್ಕೆಗಳ ತಳಭಾಗದಿಂದ ಹಿಡಿದು ತೋಕೆ (ಬಾಲ)ಯವರೆಗೆ ಹಸಿರುಮಿಶ್ರಿತ ನೀಲಿಬಣ್ಣ. ಬೆನ್ನು ಮತ್ತು ಹೊಟ್ಟೆ ಭಾಗ ಬೂದುಬಣ್ಣ. ಗಂಟಲು ಮತ್ತು ಎದೆಯ ಮೇಲ್ಭಾಗ ನೇರಳೆ ವರ್ಣ. ದೊಡ್ಡ ತಲೆ ಮತ್ತು ಗಿಡ್ಡ ಕತ್ತು ಹೊಂದಿರುವ ಇದು ನೋಡಲು ಮನಮೋಹಕ.



## ಒಲುಮೆಗೆ ಕಸರತ್ತು

ಪಕ್ಷಿ ಪ್ರಪಂಚದಲ್ಲಿ ಹೆಣ್ಣಿನ ಒಲುಮೆ ಗಳಿಸಲು ಗಂಡು ಹಕ್ಕಿಗಳು ಹಲವು ಬಗೆಯ ಕಸರತ್ತು ನಡೆಸುತ್ತವೆ. ಹೆಣ್ಣಿಗಾಗಿ ತಮ್ಮ ಬಲವನ್ನು ನಿಕಷಕ್ಕೆ ಒಡ್ಡಿಕೊಳ್ಳುತ್ತವೆ. ಹೆಣ್ಣಿನ ಕೃಪಾಕಟಾಕ್ಷಕ್ಕೆ ಬೀಳದ ಗಂಡುಗಳು ಸಂತಾನಭಾಗ್ಯ ಇಲ್ಲದೆ ಸಾಯುತ್ತವೆ. ಆದರೆ, ಗಂಡನ್ನು ಆಯ್ಕೆ ಮಾಡಿಕೊಳ್ಳುವ ಲೈಂಗಿಕ ಸ್ವಾತಂತ್ರ್ಯ ಇರುವುದು ಹೆಣ್ಣಿಗೆ ಮಾತ್ರ. ನೀಲಕಂಠ ಹಕ್ಕಿಗಳೂ ಇದರಿಂದ ಹೊರತಲ್ಲ.

ಸಂತಾನೋತ್ಪತ್ತಿ ಸಮಯದಲ್ಲಿ ಗಂಡುಹಕ್ಕಿಯು ಹೆಣ್ಣಿನ ಪ್ರೀತಿಗಾಗಿ ನಡೆಸುವ ಹೋರಾಟ ಅದ್ಭುತ. ಈ ಅವಧಿಯಲ್ಲಿ ಹೆಣ್ಣುಹಕ್ಕಿಯ ಸಮೇತ ಗಂಡುಹಕ್ಕಿಗಳು ಮರಗಳ ಮೇಲೆ ಗುಂಪುಗೂಡುತ್ತವೆ. ಹೆಣ್ಣು ಹಾರಿದ ತಕ್ಷಣ ಉಳಿದ ಗಂಡುಹಕ್ಕಿಗಳು ಅದನ್ನು ಹಿಂಬಾಲಿಸುತ್ತವೆ. ನಿರ್ದಿಷ್ಟ ಸ್ಥಳವೊಂದರಲ್ಲಿ ಹೆಣ್ಣು ಕುಳಿತುಕೊಳ್ಳುತ್ತದೆ. ಬಳಿಕ ಅದರ ಪ್ರೀತಿ ಪಡೆಯಲು ಗಂಡುಗಳ ಸಾಹಸ ಆರಂಭ. ಹೆಣ್ಣಿನ ಮುಂದೆ ಗಂಡುಹಕ್ಕಿ ಕತ್ತನ್ನು ಮೇಲೆ, ಕೆಳಗೆ ಕುಣಿಸಿ ತನ್ನ ಪ್ರೀತಿ ವ್ಯಕ್ತಪಡಿಸುತ್ತದೆ. ಗಂಡು ಮುಗಿಲಿಗೆ ಹಾರಿ ವೃತ್ತಾಕಾರವಾಗಿ ತಿರುಗುತ್ತಾ ಭೂಮಿಗೆ ಇಳಿಯುವುದನ್ನು ನೋಡುವುದೇ ಆನಂದ. ಆ ವೇಳೆ ಅದು ಜೋರಾಗಿ ಕೂಗುತ್ತದೆ. ಹೆಣ್ಣಿಗೆ ಇಷ್ಟವಾದರೆ ಅದರೊಟ್ಟಿಗೆ ಕೂಡುತ್ತದೆ. ಬಳಿಕ ಹೆಣ್ಣು, ಗಂಡು ಗುಂಪನ್ನು ತೊರೆಯುತ್ತವೆ.

## ಆವಾಸ ಎಲ್ಲೆಲ್ಲಿ?

ಹಿಮಾಲಯದ ತಪ್ಪಲು ಪ್ರದೇಶದಿಂದ ಹಿಡಿದು ದೇಶದ ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲೂ ಇವು ಕಂಡುಬರುತ್ತವೆ. ಪಾಕಿಸ್ತಾನ, ಮಾಯನ್ಮಾರ್, ಟಿಬೆಟ್ ಮತ್ತು ಚೀನಾದ ಕೆಲವೆಡೆ ನೆಲೆ ಕಂಡುಕೊಂಡಿವೆ. ಯುರೋಷಿಯನ್ ರೋಲರ್ ಮತ್ತು ಡಾಲರ್ ಬರ್ಡ್ – ಇಂಡಿಯನ್ ರೋಲರ್‌ನ ಮತ್ತೆರಡು ಪ್ರಭೇದಗಳು.

ಗ್ರಾಮೀಣ ಮತ್ತು ನಗರ ಪ್ರದೇಶದ ಅಂಚಿನಲ್ಲೂ ಇವುಗಳು ಕಂಡುಬರುತ್ತವೆ. ಕಾಡಂಚಿನ ಪ್ರದೇಶ, ಕೃಷಿ ಭೂಮಿ, ಹುಲ್ಲುಗಾವಲು ಪ್ರದೇಶದಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ನೀಲಕಂಠ ಕರ್ನಾಟಕದ ರಾಜ್ಯಪಕ್ಷಿಯಾಗಿದೆ. ಒಡಿಶಾ, ತೆಲಂಗಾಣದ ರಾಜ್ಯ ಪಕ್ಷಿಯೂ. ಉಭಯವಾಸಿಗಳಾದ ಇವು ಕಪ್ಪೆ, ಸಣ್ಣಹಾವು, ಹಣ್ಣು, ಮಿಡತೆ, ಚಿಟ್ಟೆ, ಸಣ್ಣ ಉಭಯ ಜರಿಗಳನ್ನು ಭಕ್ಷಿಸುತ್ತವೆ



ಒಣಗಿದ ಮರಗಳೇ ಇವುಗಳ ಬದುಕಿಗೆ ಆಸರೆ. ಮರಕುಟಿಗ ಅಥವಾ ಮರ ಕೊರೆಯುವ ಕೀಟಗಳು ಸೃಷ್ಟಿಸಿದ ಪೊಟರೆಗಳಲ್ಲಿ ಇವು ಗೂಡು ಕಟ್ಟುತ್ತವೆ. ಹೆಣ್ಣು 10ರಿಂದ 11 ತಿಂಗಳಿಗೆ ಪ್ರೌಢಾವಸ್ಥೆಗೆ ಬರುತ್ತದೆ. ಇವುಗಳ ಸಂತಾನೋತ್ಪತ್ತಿಯ ಅವಧಿ ಮಾರ್ಚ್‌ನಿಂದ ಜೂನ್. ಹೆಣ್ಣು ಹಕ್ಕಿ 4ರಿಂದ 5 ಮೊಟ್ಟೆ ಇಡುತ್ತದೆ. 21 ದಿನಗಳವರೆಗೆ ಕಾವು ಕೊಡುತ್ತದೆ.

ಗಂಡು, ಹೆಣ್ಣುಹಕ್ಕಿಯು ಮರಿಗಳನ್ನು ಪೋಷಿಸುತ್ತವೆ. 2 ತಿಂಗಳು ಬದುಕಿನ ಪಾಠ ಹೇಳಿಕೊಡುತ್ತವೆ. ಬಳಿಕ ಮರಿಗಳು ಭಾವನಾತ್ಮಕ ನಂಟಿನ ಕೊಂಡಿ ಕಳಚಿಕೊಂಡು ಸ್ವತಂತ್ರ ಬದುಕಿಗೆ ಅಡಿ ಇಡುತ್ತವೆ.



## ಧಾರ್ಮಿಕ ನಂಬಿಕೆ

ನೀಲಕಂಠ ಹಕ್ಕಿಯಲ್ಲಿ ಶಿವ ಸಾದೃಶ್ಯ ಕಾಣುವುದರಿಂದ ಇದಕ್ಕೆ ಹಿಂದೂ ಧರ್ಮದಲ್ಲಿ ಪೂಜನೀಯ ಸ್ಥಾನವಿದೆ. ಹಿಂದಿನ ಕಾಲದಲ್ಲಿ ಸ್ಥಳೀಯ ರಾಜರು ಮತ್ತು ಪಾಳೆಗಾರರು ಇವುಗಳನ್ನು ಸೆರೆ ಹಿಡಿದು ದಸರಾ ಹಬ್ಬದಂದು ಹಾರಿಬಿಡುತ್ತಿದ್ದರಂತೆ. ಇಂದಿಗೂ ಆಂಧ್ರಪ್ರದೇಶದ ಕೆಲವೆಡೆ ಈ ಪದ್ಧತಿ ಜೀವಂತವಾಗಿದೆ.

ದಸರಾ ಹಬ್ಬದಂದು ಈ ಹಕ್ಕಿಯನ್ನು ನೋಡಿದರೆ ಅದೃಷ್ಟ ಖುಲಾಯಿಸುತ್ತದೆ ಎಂಬ ನಂಬಿಕೆ ಬೇರೂರಿದೆ. ಇದನ್ನು ಹಿಡಿದು ಮನದಲ್ಲಿರುವ ಅಭಿಲಾಷೆಯನ್ನು ಬೇಡಿಕೊಂಡರೆ ಅದನ್ನು ನೇರವಾಗಿ ಶಿವನಿಗೆ ತಲುಪಿಸುತ್ತವೆ ಎನ್ನುವುದು ಪ್ರತೀತಿ. ಹಾಗಾಗಿ, ಹಬ್ಬದ ಆಸುಪಾಸಿನಲ್ಲಿ ಅಕ್ರಮವಾಗಿ ಈ ಹಕ್ಕಿಗಳನ್ನು ಸೆರೆ ಹಿಡಿದು ಪಂಜರದಲ್ಲಿ ಇಡಲಾಗುತ್ತದೆ. ಧಾರ್ಮಿಕ ನಂಬಿಕೆ ಇರುವ ಜನರಿಗೆ ಮಾರಾಟ ಮಾಡಲಾಗುತ್ತದೆ. ಹಬ್ಬದ ದಿನದಂದು ಅವುಗಳನ್ನು ಪಂಜರದಿಂದ ಹಾರಿಬಿಡಲಾಗುತ್ತದೆ.

ಚಿತ್ರಗಳು: ಜೆ.ವಿ. ಆನಂದಮೂರ್ತಿ, ವಿಶ್ವನಾಥ ಸುವರ್ಣ, ಇರ್ಷಾದ್ ಮೊಹಮ್ಮದ್